ಬುದ್ದ ವೀಕ್ಷಣೆ ಸ್ಥಳದ ಅಭಿವೃದ್ಧಿ

329(540); ಶ್ರೀ ಗುರು ಪಾಟೀಲ ಶಿರವಾಳ (ಶಹಾಪುರ)

ಅ) ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಶಹಾಪುರ ಪಟ್ಟಣದಲ್ಲಿ ಮಲಗಿರುವ ಬುದ್ದ ವೀಕ್ಷಣೆ ಸ್ಥಳದ ಅಭಿವೃದ್ಧಿಗೆ ಪ್ರವಾಸೋದ್ಯಮ ಇಲಾಖೆಯಿಂದ ಮಂಜೂರಾದ ಹಣವೆಷ್ಟು,

ಆ) ಅಧಿಕಾರಿಗಳ ನಿರ್ಲಕ್ಷ್ಯೆಯಿಂದ ಬಿಡುಗಡೆಯಾದ ಹಣ ಖರ್ಚಾಗದೆ ಸರ್ಕಾರಕ್ಕೆ ಹಿಂದಿರುಗಿಸಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ನಿರ್ಲಕ್ಷ್ಯ ವಹಿಸಿದ್ದ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು,

ಈ) ಈ ಯೋಜನೆ ಮತ್ತೆ ಕೈಗೆತ್ತಿಕೊಳ್ಳಲು ಸರ್ಕಾರದ ಕ್ರಮವೇನು?

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯವ ಸಚಿವರು)

ಅ) ಈ ಯೋಜನೆಗೆ ಮಂಜೂರಾದ ಹಣ ₹ 438.27 ಲಕ್ಷಗಳು.

ಆ) ಸೂಕ್ತ ಜಮೀನು ದೊರಕದೇ ಇದ್ದುದರಿಂದ ಯೋಜನೆ ಜಾರಿಗೊಳಿಸಲು ಸಾಧ್ಯವಾಗಿಲ್ಲ

ಇ) ಉದ್ಭವಿಸುವುದಿಲ್ಲ.

ಈ) ಈ ಯೋಜನೆಗಾಗಿ ಸೂಕ್ತ ಜಮೀನನ್ನು ಭೂಸ್ವಾಧೀನ ಮಾಡಿಕೊಡುವಂತೆ ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ. ಸೂಕ್ತ ಜಮೀನು ದೊರೆತ ನಂತರ ಅಲ್ಲಿ ಯಾವ ರೀತಿಯ ಪ್ರವಾಸಿ ಸೌಲಭ್ಯವನ್ನು ಕಲ್ಪಿಸಬಹುದೆಂಬ ಬಗ್ಗೆ ಪರಿಶೀಲಿಸಲಾಗುವುದು